

ಪ್ರಜ್ಞಾಹೀನ ಹುಡುಗಿಯನ್ನು ಆಸ್ಪತ್ರೆಗೆ ಹೊತ್ತೊಯ್ಯುತ್ತಿರುವ ಪೋಷಕರು

ವ್ಯಾಪಕ ಟೀಕೆಗಳು ಬಂದಿದ್ದವು. ಇಲ್ಲಿ ಫ್ಯಾಕ್ಟರಿಯನ್ನು ಆರಂಭಿಸಿದ ಮೂರೇ ವರ್ಷಗಳಲ್ಲಿ 2000ದಲ್ಲಿ ಒಮ್ಮೆ ಸ್ಫೋಟ ಸಂಭವಿಸಿತ್ತು. ಆಗಲಾದರೂ ಅದನ್ನು ಮುಚ್ಚಿಸಿಲ್ಲ ಅಥವಾ ದೂರಕ್ಕೆ ವರ್ಗಾಯಿಸಿಲ್ಲ ಯಾಕೆ? ಲಾಕ್‌ಡೌನ್ ಸಡಿಲಗೊಳಿಸಿ, ತೀರ ಅತ್ಯಗತ್ಯ ವಸ್ತುಗಳನ್ನು ಉತ್ಪಾದಿಸುವ ಉದ್ಯಮಗಳನ್ನು ಮಾತ್ರ ಮತ್ತೆ ಆರಂಭಿಸಲು ಅನುಮತಿ ಕೊಡಬೇಕಿದ್ದ ಸರ್ಕಾರ ಈ ಕಾರ್ಖಾನೆಗೆ ಅನುಮತಿ ಕೊಟ್ಟಿದ್ದು ಹೇಗೆ? ಪ್ಲಾಸ್ಟಿಕ್ ವಸ್ತುಗಳು ಅಷ್ಟೊಂದು ಅನಿವಾರ್ಯವೆ? ಇದರ ಹಿಂದಿನ ಸತ್ಯಗಳು ಎಂದೂ ಬೆಳಕಿಗೆ ಬರಲಾರವೇನೊ.

## ಮೈಸೂರಿನ ‘ಜ್ವಲಂತ’ ಉದಾಹರಣೆ

ಮೂರು ವರ್ಷಗಳ ಹಿಂದೆ ನಗರದ ಹೊರವಲಯದ ಶಾದನಹಳ್ಳಿ ಎಂಬಲ್ಲಿ ಕಾಡಂಚಿನಲ್ಲಿ ಹೋಗುತ್ತಿದ್ದ ಇಬ್ಬರು ಹುಡುಗರು ಅಲ್ಲಿ ಕಂಡ ಬೂದಿಯಂಥ ತ್ಯಾಜ್ಯರಾಶಿಯ ಮೇಲೆ ಕಾಲಿಟ್ಟರು. ಹರ್ಷಲ್ ಎಂಬ ಹುಡುಗ ಕೆಮಿಕಲ್ ಜ್ವಾಲೆಗೆ ಸಿಕ್ಕು ಮೃತಪಟ್ಟ. ಅದು ಯಾವ ಕೆಮಿಕಲ್? ಯಾವ ಕಾರ್ಖಾನೆಯಿಂದ ಅದನ್ನು ಸಾಗಿಸಿ ತಂದು ಯಾರು ಅದನ್ನು ಹಾಗೇ ಬಿಸಾಡಿದ್ದರು? ಯಾಕೆ ಪುಟ್ಟ ಬೇಲಿಯನ್ನಾಗಲೀ ಎಚ್ಚರಿಕೆಯ ಫಲಕವನ್ನಾಗಲೀ ಹಾಕಿರಲಿಲ್ಲ? ಯಾರಿಂದಲೂ ಸ್ಪಷ್ಟ ಉತ್ತರ ಬರಲಿಲ್ಲ. ಎಲ್ಲ ಬಗೆಯ ಕೆಮಿಕಲ್ ತ್ಯಾಜ್ಯಗಳ ಮೇಲೆ ನಿಗಾ ಇಡಬೇಕಿದ್ದ ಮಾಲಿನ್ಯ ನಿಯಂತ್ರಣ ಮಂಡಳಿಯೂ ಬಾಯಿ ಬಿಡಲಿಲ್ಲ. ಮೈಸೂರಿನಲ್ಲಿ ಕೆಮಿಕಲ್ ಫ್ಯಾಕ್ಟರಿಗಳ ಸಂಖ್ಯೆ ತೀರಾ ಕಡಿಮೆ ಇದೆ. ಯಾವ ಕಾರ್ಖಾನೆಯಲ್ಲಿ ಎಂಥ ತ್ಯಾಜ್ಯಗಳು ಹೊಮ್ಮುತ್ತವೆ ಎಂಬ ಚಿಕ್ಕ ಪಟ್ಟಿಯೊಂದು ಎಲ್ಲ ಪಂಚಾಯತ್‌ಗಳಲ್ಲಿ, ಪೊಲೀಸ್ ಇಲಾಖೆಯಲ್ಲಿ, ಜಿಲ್ಲಾಧಿಕಾರಿ ಕಚೇರಿಯಲ್ಲಿ ಹಾಗೂ ಪತ್ರಿಕಾ ಕಚೇರಿಗಳಲ್ಲಿ ಲಭ್ಯ ಇರಬೇಕಿತ್ತು. ಆದರೂ ಯಾರಿಗೂ ಗೊತ್ತಾಗಲಿಲ್ಲ. ಮಾಧ್ಯಮಗಳೂ ಬೂದಿ ಮುಚ್ಚಿದ ಕೆಂಡವನ್ನು ಕೆಣಕಲು ಹೋಗಲಿಲ್ಲ. ತಪ್ಪಿತಸ್ಥರನ್ನು ಗುರುತಿಸಿದ ವರದಿಯಂತೂ ಬರಲಿಲ್ಲ. ಪ್ರಕರಣವನ್ನು ಮುಚ್ಚಿ ಹಾಕಲಾಯಿತೆಂದು ಜನರು ಮಾತಾಡಿಕೊಂಡರೇ ವಿನಾ, ಶಾದನಹಳ್ಳಿಯ ಕೆಮಿಕಲ್ ಕೊಂಡವನ್ನು ಮುಚ್ಚಿ ಹಾಕಲಾಯಿತೆ ಇಲ್ಲವೆ ಎಂಬುದೂ ನಿಖರವಾಗಿ ಗೊತ್ತಾಗಲಿಲ್ಲ.

ವಿಶಾಖಪಟ್ಟಣದ ಎಲ್‌ಜಿ ಪಾಲಿಮರ್ಸ್‌



ಭೋಪಾಲ್ ಅನಿಲ ದುರಂತ ನಡೆದು ಮೂರೂವರೆ ದಶಕಗಳ ನಂತರವೂ ಸಂತ್ರಸ್ತರಿಗೆ ಸಮರ್ಪಕ ಪುನರ್ವಸತಿ ಮತ್ತು ಪರಿಹಾರ ದೊರೆತಿಲ್ಲ. ಅಂಗವೈಕಲ್ಯಕ್ಕೆ ಒಳಗಾಗಿರುವ ವಿಕಾಸ್ ಯಾದವ್ ಮತ್ತು ಅಮನ್ ಯಾದವ್ ಎನ್ನುವ ಈ ತರುಣರ ಮುಖಗಳೇ ಭೋಪಾಲ್ ದುರಂತದ ದಾರುಣತೆ ಹಾಗೂ ಸಂತ್ರಸ್ತರನ್ನು ಬಂಡವಾಳಶಾಹಿ ವ್ಯವಸ್ಥೆ ನಡೆಸಿಕೊಂಡ ರೀತಿಯನ್ನು ಹೇಳುವಂತಿವೆ.